| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಓ. ಎಸ್. ನಂ.243/2017 | | | |
| ಸಾಕ್ಷಿದಾರರ ಹೆಸರು | ಆಂಜಪ್ಪ | | |
| ತಂದೆಃ ಹೆಸರು | ಮುನಿವೆಂಕಟಪ್ಪ | ಪಿಡಬ್ಲ್ಯೂಃ | 7 |
| ವಯಸ್ಸು | 42 ವರ್ಷ | | |
| ಉದ್ಯೋಗ | ಖಾ ಸಗಿ ಕೆಲಸ | ಪ್ರಮಾಣ ವಚನ | |
| ವಾಸ ಸ್ಥಳ | ಮಾಡಿಕೆರೆ | ಭೋದಿಸಿದ ದಿನಾಂಕ | 31-03-2023 |

ಮುಖ್ಯ ವಿಚಾರಣೆಃ ಶ್ರೀ ಐ ಎಸ್ ಡಿ ವಕೀಲರಿಂದಃ

ನಾನು ವಾದಿಪರ ಸಾಕ್ಷಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು , ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಯಿಸಿ ತಿಳಿದುಕೊಂಡಿರುತ್ತೇನೆ ಹಾಗೂ ಈ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿ ಸಹಿ ಮಾಡಿರುತ್ತೇನೆ.

1. ನಿಪಿ-6 ಇರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 (ಬಿ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಟಿ ಎನ್ ಎಸ್ ವಕೀಲರಿಂದ

ದೇವರಾಜ್ ಎನ್ನುವ ಸ್ಟಾಂಪ್ ಪೆಂಡರ್ ಹತ್ತಿರ ನಾನು ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತೇನೆ. ದೇವರಾಜ್ ಎನ್ನುವ ಸ್ಟಾಂಪ್ ಪೆಂಡರ್ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಕೆಲಸ ಮಾಡುತ್ತಾರೆ. ಮಂಜುಳಮ್ಮನವರು ಬಂದು ಸಾಕ್ಷಿಗೆ ಸಹಿ ಹಾಕಿ ಎಂದ ಮೇರೆಗೆ ನಾನು ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ. ಪಾರ್ವತಮ್ಮನವರು ನನ್ನ ಮುಂದೆ ಯಾವುದೇ ದಾಖಲೆಗೆ ರುಜು ಹಾಕಿರುವುದನ್ನು ನಾನು ನೋಡಿರುವುದಿಲ್ಲ. ದಿಃ22-08-2012 ರ ಪತ್ರವನ್ನು ನಾನು ನೋಡಿರುತ್ತೇನೆ ದಿಃ22-08-2012 ರ ಪತ್ರಕ್ಕೆ ನಾಗರಾಜ್ , ನಾನು ಸಹಿ ಹಾಕಿರುತ್ತೇವೆ. ದಿಃ22-08-2012 ರ ಪತ್ರಕ್ಕೆ ನಾನು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಸಹಿ

ಹಾಕಿರುತ್ತೇನೆ. ದಿಃ22-08-2012 ರ ಪತ್ರವನ್ನು ಬಿಟ್ಟು ಇನ್ನು ಯಾವುದೇ ಪತ್ರಕ್ಕೆ ಸಹಿ ಹಾಕಿರುವುದಿಲ್ಲ. ದಿಃ24-06-11 ಹಾಗೂ ದಿಃ19-05-12 ರ ವಿಲ್ ಅನ್ನು ನಾನು ನೋಡಿರುವುದಿಲ್ಲ ಹಾಗೂ ಓದಿರುವುದಿಲ್ಲ. ದಿಃ24-06-11 ಹಾಗೂ ದಿಃ19-05-12 ರ ವಿಲ್ ಬಗ್ಗೆ ನನಗೆ ಮಂಜುಳಮ್ಮ ರವರು ತಿಳಿಸಿರುತ್ತಾರೆ. ದಿಃ24-06-11 ಹಾಗೂ ದಿಃ19-05-12 ರ ವಿಲ್ ಅನ್ನು ಪಾರ್ವತಮ್ಮನವರು ಮಂಜುಳಮ್ಮನಿಗೆ ಬರೆದುಕೊಟ್ಟಿರುತ್ತಾರೆ ಅಂತ ಅವರೇ ತಿಳಿಸಿರುತ್ತಾರೆ. ದಿಃ22-08-2012 ರ ವಿಲ್ ಪಾರ್ತಮ್ಮನವರಿಗೆ ಮಂಜುಳಮ್ಮನವರಿಗೆ ಬರೆಸಿಕೊಟ್ಟಿರುತ್ತಾರೆ. ದಿಃ22-08-2012 ರ ವಿಲ್ಅನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಿಃ22-08-2012 ರ ವಿಲ್ ಗೆ ನನ್ನ ಮುಂದೆ ನಾಗರಾಜ್ ಎನ್ನುವವರು ಸಹಿ ಹಾಕಿರುತ್ತಾರೆ. ಬೇರೆ ಯಾರು ಸಹಿ ಹಾಕಿರುವುದನ್ನು ನಾನು ನೋಡಿರುವುದಿಲ್ಲ. ದಿಃ22-08-2012 ರ ವಿಲ್ಅನ್ನು ಎಲ್ಲಿ ಯಾರು ಬರೆದರು ಎಂದರೆ ಸಾಕ್ಷಿಯು ಅವರು ಮೊದಲೇ ಕಂಪ್ಯೂಟರ್ ನಲ್ಲಿ ಬೆರಳಚ್ಚುಪಡಿಸಿಕೊಂಡು ಬಂದು ನನ್ನ ಮುಂದೆ ಇಟ್ಟಿದ್ದು ನಾನು ಸಹಿ ಹಾಕಿರುತ್ತೇನೆ. ಆ ವಿಲ್‌ನ ಬಗ್ಗೆ ಮಂಜುಳಮ್ಮನನ್ನು ಹೊರತುಪಡಿಸಿ ಬೇರೆ ಯಾರೂ ಹೇಳಿರುವುದಿಲ್ಲ. ನಾವು ಸಹಿ ಹಾಕಿದ ದಿವಸವೇ ವಿಲ್ ಅನ್ನು ಮಾಡಿಸಿಕೊಂಡು ಬಂದಿರುತ್ತಾರೆ. ದಿಃ24-06-11 ಹಾಗೂ ದಿಃ19-05-12 ರ ಎರಡೂ ವಿಲ್ ಅನ್ನು ಮಂಜುಳಮ್ಮ ತೆಗೆದುಕೊಂಡು ಬಂದಿದ್ದರು ಅದನ್ನು ನಾನು ನೋಡಿರುತ್ತೇನೆ.

ದಿಃ22-08-2012 ರ ವಿಲ್ ಅನ್ನು ಬರೆದುಕೊಟ್ಟವರು ಆ ದಿನ ಇರಲಿಲ್ಲ. ದಿಃ22-08-2012 ರ ವಿಲ್ ಬಗ್ಗೆ ಸಬ್ ರಿಜಿಸ್ಟ್ರಾರ್ ಮುಂದೆ ಯಾರೂ ಹೇಳಿಕೆ ನೀಡಿರುವುದಿಲ್ಲ. ವಿಲ್ ಮಾಡುತ್ತಿದ್ದೇನೆ ಅಂತ ಹೇಳಿದ್ದನ್ನು ಬಿಟ್ಟು ಬೇರೆ ಏನೂ ಗೊತ್ತಿರುವುದಿಲ್ಲ. ಸಬ್ ರಿಜಿಸ್ಟ್ರಾರ್ ಕಛೇರಿಗೆ ಮಂಜುಳಮ್ಮನವರು ಆಗಾಗ ಬರುತ್ತಿದ್ದರು ಆಗ ಪರಿಚಯ ಇರುತ್ತಾರೆ. ನಾವು ವಿಲ್ ಸಹಿ ಹಾಕುವ ಪೂರ್ವದ 5-6 ವರ್ಷದ ಹಿಂದೆ ಮಂಜುಳಮ್ಮನವರು ಸಬ್ ರಿಜಿಸ್ಟ್ರಾರ್ ಕಛೇರಿಗೆ ಬರುತ್ತಿದ್ದರು. ನಾವಾಗಲೀ ನಮ್ಮ ಸಬ್ ರಿಜಿಸ್ಟ್ರಾರ್ ಆಗಲೀ ಮಂಜುಳಮ್ಮನಿಗೆ ಯಾವುದೇ ದಾಖಲೆ ಮಡಿಕೊಟ್ಟಿಲ್ಲ. ನಾವು ಅವರಿಂದ ಯಾವುದೇ ದಾಖಲೆಗೆ ತೆಗೆದುಕೊಂಡಿಲ್ಲ.

ಪಾರ್ವತಮ್ಮನವರನ್ನು ನಾನು ನೋಡಿಲ್ಲ. ನಮ್ಮ ಕಛೇರಿಯ ಬಳಿ ಯಾವತ್ತೂ ಬಂದಿರುವುದಿಲ್ಲ. ಮಂಜುಳಮ್ಮ ಮತ್ತು ಪಾರ್ವತಮ್ಮನಿಗೆ ಏನು ಸಂಬಂಧ ಅಂತ ಖುದ್ದಾಗಿ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರಿದು ಅವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪಾರ್ವತಮ್ಮನವರನ್ನು ಎಂದೂ ಬೇಟಿ ಮಾಡಿರುವುದಿಲ್ಲ. ನಾನು ಪಾರ್ವತಮ್ಮನವರನ್ನು ಬೇಟಿ ಮಾಡುತ್ತಿದ್ದೆ ಅಂತ ನನ್ನ ವಕೀಲರಿಗೆ ಹೇಳಿ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಅಂತ ನಾನು ತಿಳಿದುಕೊಂಡಿರುತ್ತೇನೆ. ಮಂಜುಳಮ್ಮ ಮತ್ತು ಪಾರ್ವತಮ್ಮನಿಗೆ ದತ್ತು ಮಗಳಲ್ಲದಿದ್ದರೂ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ.6 ದಾಖಲೆಯನ್ನು ನನಗೆ ತೋರಿಸಿರುತ್ತಾರೆ. ನಿಪಿ.6 ಕ್ಕೆ ಸಹಿ ಹಾಕಿರಲಿಲ್ಲ ಆದರೆ ನೊಂದಣಿ ಸಮಯದಲ್ಲಿ ಹಾಕಿರುತ್ತೇವೆ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

Plaintiff and defendant counsel are present. Pw6 absent. In spite giving sufficient opportunity pw6 not come forward to tender cross examination.

Witness by name of Sri. Anjappa S/o Munivenktappa examination as pw7 . Chief examination filed by way of affidavit, got marked ExP6(b) defendant No.1 counsel fully cross examined. Defendant No.2 and 3 have not filed Written statement.

For defendant evidence.

Call on 12-04-2023.

**Prl. C. J. & JMFC,.**
**Chintamani**.